# "ಓಸ್ಟಿಯೋಆರ್ಥ್ರೈಟಿಸ್ ಸಂಕೀರ್ಣತೆಗಳನ್ನು ಕಡಿಮೆಗೊಳಿಸಲು ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಬಳಿ ಪರಿಹಾರ ಲಭ್ಯವಿದೆ."

**ಡಾ. ಶ್ರೀಕಾಂತ್ ಮೋರ್ಲಾವರ್**
ಸಿಎಂಡಿ
ಹೋಮಿಯೋಕೇರ್ ಇಂಟರ್‌ನ್ಯಾಷನಲ್



ಓಸ್ಟಿಯೋಆರ್ಥ್ರೈಟಿಸ್ ಎಂಬುದು ಕೀಲುಗಳಿಗೆ ಸಂಬಂಧಿಸಿದ ಒಂದು ಬಹುಸಾಮಾನ್ಯ ಅಸ್ವಸ್ಥತೆಯಾಗಿದೆ. ವಿಶ್ವದಾದ್ಯಂತ ಲಕ್ಷಾಂತರ ಜನರು ಕೀಲುಗಳ ಕಾಯಿಲೆಗಳಿಂದ ಬಳಸುತ್ತಿದ್ದಾರೆ. ಓಸ್ಟಿಯೋಆರ್ಥ್ರೈಟಿಸ್ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳು ನಡೆಯುವಿಕೆ, ನಿಲ್ಲುವಿಕೆ, ಮೆಟ್ಟಿಲು ಏರುವಿಕೆ ಮತ್ತು ಇಳಿಯುವಿಕೆ ಮುಂತಾದ ರೀತಿಯ ದೈನಂದಿನ ಚಟುವಟಿಕೆಗಳಲ್ಲಿ ಯಾತನೆ ಅನುಭವಿಸುತ್ತಾರೆ. ಜೀವನಶೈಲಿಯ ಬದಲಾವಣೆಯಿಂದಾಗಿ ಹಿರಿಯ ನಾಗರಿಕರಿಗೆ ಅಷ್ಟೆ ಅಲ್ಲದೆ, ಯುವಜನಾಂಗದ ಮೇಲೆ ಕೂಡ ಸೋಂಕುಗಳು, ಕೀಲುಗಳ ಹಾನಿ ಮತ್ತು ವಿಟಾಮಿನ್ ಕೊರತೆಯ ರೂಪದಲ್ಲಿ ಓಸ್ಟಿಯೋಆರ್ಥ್ರೈಟಿಸ್ ಸಮಸ್ಯೆ ಬಾಧಿಸುತ್ತದೆ. ದೀರ್ಘಕಾಲೀನ ಓಸ್ಟಿಯೋಆರ್ಥ್ರೈಟಿಸ್ ಸಮಸ್ಯೆಯಿಂದಾಗಿ ಕೀಲುಗಳಲ್ಲಿ ವೈಫಲ್ಯತೆ ಕೂಡ ಉಂಟಾಬಹುದಾಗಿದೆ. ಆದ್ದರಿಂದ, ಇದನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ ಚಿಕಿತ್ಸೆ ನೀಡಿದರೆ ಭವಿಷ್ಯದಲ್ಲಿ ಉಂಟಾಗಬಹುದಾದ ಹಾನಿಗಳಿಂದ ತಪ್ಪಿಸಿಕೊಳ್ಳಬಹುದಾಗಿದೆ.

ಇನ್ನಿತರೆ ಮಾದರಿಯ ಆರ್ಥ್ರೈಟಿಸ್ ಸಮಸ್ಯೆಗಳಂತೆಯೇ, ಓಸ್ಟಿಯೋಆರ್ಥ್ರೈಟಿಸ್ ಕೂಡ ಎಲ್ಲಾ ಕೀಲುಗಳ ಮೇಲೆ ಪರಿಣಾಮ ಬೀರುತ್ತದೆ. ಸಾಮಾನ್ಯವಾಗಿ ಓಸ್ಟಿಯೋಆರ್ಥ್ರೈಟಿಸ್ ಅನ್ನು ವಿಯರ್–ಅಂಡ್–ಟಿಯರ್ ಆರ್ಥ್ರೈಟಿಸ್ ಎಂದು ಕರೆಯಲಾಗುತ್ತಿದ್ದು, ಇದೊಂದು ರೀತಿಯ ಸ್ಥಿತಿಯಾಗಿದ್ದು ಇಂತಹ ಸ್ಥಿತಿಯಲ್ಲಿ ಕೀಲುಗಳ ಮಧ್ಯಭಾಗದಲ್ಲಿ ನೈಸರ್ಗಿಕವಾದ ಮೃದುತ್ವವನ್ನು ಒದಗಿಸುವ ಕಾರ್ಟಿಲೇಜ್ ಸವಕಳಿಗೊಳ್ಳುತ್ತದೆ. ಹೀಗೆ ಸವಕಳಿ ಉಂಟಾಗುವುದರಿಂದಾಗಿ, ಕಾರ್ಟಿಲೇಜ್‌ನ ಒತ್ತಡ–ತಡೆಯುವ ಶಕ್ತಿಯು ಕುಂಠಿತಗೊಂಡು ಕೀಲು ಮೂಳೆಗಳ ನಡುವೆ ಅಂತರ ಕುಂಠಿತವಾಗಿ ಪರಸ್ಪರ ಘರ್ಷಣೆ ಹೆಚ್ಚುತ್ತದೆ. ಈ ಘರ್ಷಣೆ ಹೆಚ್ಚಾದಾಂತೆಲ್ಲ ನೋವು, ಊತ, ಬಿಗಿತ, ಚಲನವಲನ ಕ್ರಿಯೆಗಳಲ್ಲಿ ಸಮಸ್ಯೆ ಉದ್ಭವಿಸುತ್ತವೆ ಮತ್ತು ಇನ್ನು ಕೆಲವೊಮ್ಮೆ ಮೂಳೆ ಮುಳ್ಳು ಕೂಡ ಉಂಟಾಗುತ್ತವೆ.

## ತಪಾಸಣಾ ಪರೀಕ್ಷೆಗಳು:

ರಕ್ತ ಪರೀಕ್ಷೆ ಮೂಲಕ ತಪಾಸಣಾ ಪ್ರಕ್ರಿಯೆ ಆರಂಭಗೊಳ್ಳುತ್ತದೆ ಮತ್ತು ಕೀಲುಗಳಲ್ಲಿ ದ್ರವಗಳನ್ನು ಪರೀಕ್ಷಿಸುವ ಮೂಲಕ, ಸಿ.ಟಿ.ಸ್ಕ್ಯಾನ್, ಎಕ್ಸ್-ರೇ ಮತ್ತು ಎಂಆರ್‌ಐ ಮುಖಾಂತರ ತಪಾಸಿಸಬಹುದಾಗಿದೆ.

## ಓಸ್ಟಿಯೋಆರ್ಥ್ರೈಟಿಸ್‌ಗೆ ಕಾರಣವೇನು?

ಸಾಮಾನ್ಯವಾಗಿ 45 ವರ್ಷ ಪ್ರಾಯದ ನಂತರ ಓಸ್ಟಿಯೋಆರ್ಥ್ರೈಟಿಸ್ ಗೋಚರಿಸುತ್ತದೆ ಮತ್ತು ಪುರುಷರಿಗಿಂತ ಮಹಿಳೆಯರಲ್ಲಿಯೇ ಇದು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಇದರ ಕೆಲವು ಲಕ್ಷಣಗಳು ಹೀಗಿರುತ್ತವೆ:

- ಅಧಿಕ ತೂಕ ಹೊಂದಿರುವುದು.
- ಕೀಲುಗಳಿಗೆ ಪೆಟ್ಟು.
- ಸಮರ್ಪಕವಾಗಿ ರೂಪುಗೊಳ್ಳದಿರುವ ಕೀಲುಗಳು.
- ಕೀಲುಗಳಲ್ಲಿನ ಕಾರ್ಟಿಲೇಜ್ ರೂಪಗೊಳ್ಳುವಲ್ಲಿನ ಅನುವಂಶಿಕ ನ್ಯೂನತೆ.
- ಕೆಲವು ಉದ್ಯೋಗ ಮತ್ತು ಕ್ರೀಡೆಗಳಿಂದಾಗಿ ಕೀಲುಗಳ ಮೇಲಿನ ಅತಿರಿಕ್ತ ಒತ್ತಡ.
- ಇನ್ನಿತರೆ ಕಾಯಿಲೆಗಳು. (ಉದಾ: ರ್‍ಯೂಮಟಾಯ್ಡ್ ಆರ್ಥ್ರೈಟಿಸ್)



## ರೋಗ ಲಕ್ಷಣಗಳು:

- **ನೋವು:** ಚಲನೆಯ ಸಮಯದಲ್ಲಿ ಅಥವಾ ನಂತರದಲ್ಲಿ ಕೀಲುಗಳು ನೋಯುವುದು.
- **ನವಿರತೆ:** ಕೀಲುಗಳ ಮೇಲೆ ಲಘುವಾದ ಒತ್ತಡ ಹಾಕಿದಾಗ ಅಲ್ಲಿ ನವಿರತೆ ಅನುಭವ ಉಂಟಾಗುವುದು.
- **ಬಿಗಿತ:** ಬೆಳಗ್ಗೆ ನಿದ್ರೆಯಿಂದ ಎಚ್ಚೆತ್ತಾಗ ಅಥವಾ ಒಂದಿಷ್ಟು ಸಮಯ ನಿಷ್ಕ್ರಿಯವಾಗಿದ್ದು ನಂತರ ಕ್ರಿಯಾಶೀಲಗೊಂಡಾಗ ಕೀಲುಗಳು ಬಿಗಿದುಕೊಂಡಿರುವ ಅನುಭವ.
- **ಫ್ಲೆಕ್ಸಿಬಿಲಿಟಿ ಹಾನಿ:** ನೀವು ನಿಮ್ಮ ಕೀಲುಗಳನ್ನು ಅವುಗಳ ಸಂಪೂರ್ಣ ಸಾಮರ್ಥ್ಯಕ್ಕೆ ತಕ್ಕಂತೆ ತಿರುಗಿಸಲು ಸಾಧ್ಯವಾಗದಿರುವುದು.
- **ಲಟಮಟಿಕೆ ಸಂವೇದನೆ:** ನೀವು ಕೀಲುಗಳನ್ನು ಬಳಸುವಾಗ ಲಟಮಟಿಕೆ ಸಂವೇದನೆಯನ್ನು ಆಲಿಸಬಹುದು ಅಥವಾ ಅನುಭವಿಸಬಹುದು.
- **ಮೂಳೆಯ ಮುಳ್ಳು:** ಬಾಧಿತ ಕೀಲುಗಳ ಸುತ್ತಲಿನಲ್ಲಿ ಮುಳ್ಳಿನಂತೆ ಮೂಳೆಯ ಪ್ರತ್ಯೇಕ ಭಾಗ ಬೆಳೆಯುವುದು ಮತ್ತು ಗಡುಸಾದ ಗಂಟಿನಂತೆ ಅನುಭೂತಿ ಉಂಟಾಗುವುದು.

**ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಚಿಕಿತ್ಸೆ:** ಓಸ್ಟಿಯೋಆರ್ಥ್ರೈಟಿಸ್‌ಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ತನ್ನ ಪರಿಣಾಮಕಾರಿ ಜೆನೆಟಿಕ್ ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸೆಯನ್ನು ನೀಡುತ್ತದೆ. ಈ ಚಿಕಿತ್ಸೆಯಲ್ಲಿ, ರೋಗಿಯ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಗಳನ್ನು ಪರೀಕ್ಷಿಸಲಾಗುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ಚಿಕಿತ್ಸೆ ನೀಡಲಾಗುತ್ತದೆ. ಅಲ್ಲದೆ, ಕೀಲು ನೋವುಗಳನ್ನು, ಊತವನ್ನು ಕಡಿಮೆಗೊಳಿಸಲು ವಿಶೇಷ ಆರೈಕೆ ನೀಡುತ್ತ ಓಸ್ಟಿಯೋಆರ್ಥ್ರೈಟಿಸ್‌ನ್ನು ಪರಿಣಾಮಕಾರಿಯಾಗಿ ಶಮನಗೊಳಿಸಲಾಗುತ್ತದೆ.

ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಶುಲ್ಕ ರಹಿತ 1800 108 1212
ಉಚಿತ ಸಮಾಲೋಚನೆ 955 000 1133
www.homeocare.in